# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

## -:ವಾರ್ಡ್-42ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

ಎಂದಿನಂತೆ ದಿನಾಂಕ:- 03.12.2022 ರಂದು ಬೆಳಿಗ್ಗೆ 11.00 ಗಂಟೆಗೆ ಅಧ್ಯಕ್ಷರ ಆಗಮನದೊಂದಿಗೆ ವಾರ್ಡ್ ನಂ.42 ಲಕ್ಷ್ಮೀದೇವಿನಗರ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ:-42ರ ವಾರ್ಡ್ ಕಛೇರಿಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು ಈ ಕೆಳಕಂಡಂತಿರುತ್ತದೆ.

**ಸಭೆಗೆ ಹಾಜರಿದ್ದ ಅಧಿಕಾರಿಗಳು:-**

1. ಶ್ರೀ.ರಮೇಶ್ ಎನ್. ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
2. ಶ್ರೀಮತಿ. ನಿರ್ಮಲ ಕೆ. ಕಂದಾಯ ಪರಿವೀಕ್ಷಕರು ವಾರ್ಡ್ ನಂ.42.
3. ಶ್ರೀ. ನಾರಾಯಣ ಸ್ವಾಮಿ, ಸೂಪರ್ ವೈಸರ್ ಎಸ್. ಡಬ್ಲ್ಯೂ.ಎಂ.
4. ಶ್ರೀ. ದೇವರಾಜು, ಮೇಲ್ವಿಚಾರಕರು, ವಾರ್ಡ್ ನಂ.42.
5. ಶ್ರೀ. ನಾರಾಯಣ ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.42.
6. ಶ್ರೀಮತಿ. ವಲರ್ಮದಿ, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.42.
7. ಶ್ರೀ. ನಾಗರಾಜು, ಸೂಪರ್ ವೈಸರ್.
8. ಶ್ರೀ. ಮುತ್ಯಾಲಪ್ಪ, ಸೂಪರ್ ವೈಸರ್.

**ಸಭೆಗೆ ಗೈರು ಹಾಜರಿದ್ದ ಅಧಿಕಾರಿಗಳು:-**

01. ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆ ಅಧಿಕಾರಿಗಳು
02. ಬೀದಿ ದೀಪಗಳ ಪರಿವೀಕ್ಷಕರು
03. ಪಶು ಸಂಗೋಪನೆ ಇಲಾಖೆ ವಾರ್ಡ್-42.
04. ಅಗ್ನಿ ಶಾಮಕ ಠಾಣೆ, ಟಿ.ವಿ.ಎಸ್.ಕ್ರಾಸ್ ಪೀಣ್ಯ,
05. ಬಿಡ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳು ಹಾಗೂ ಬೆಸ್ಕಾಂ ಅಧಿಕಾರಿಗಳು.

ವಾರ್ಡ್-42ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ಆನಂದ ವಾರ್ಡ್ ಸಮಿತಿ ಸದಸ್ಯರು ಮಾತಾನಾಡಿ ಜೈ ಭುವನೇಶ್ವರಿನಗರದಲ್ಲಿ ಬಹಳ ಹಳೆಯದಾಗಿ ವಾಲಿದ್ದ ಕರೆಂಟ್ ಕಂಬಗಳನ್ನು ಬೆ.ಸ್ಕಾಂ ಅಧಿಕಾರಿಗಳು ತೆರವುಗೊಳಿಸಿರುವ ಬಗ್ಗೆ ಹರ್ಷ ವ್ಯಕ್ತ ಪಡಿಸಿ ಸಮಿತಿ ಸಭೆಗೆ ವಂದನೆಗಳನ್ನು ತಿಳಿಸಿದರು.

ನಾರಯಣ ಸ್ವಾಮಿ ರವರು ಮಾತಾನಾಡಿ ನಂದಿನಿ ಬಡಾವಣೆ 2ನೇ ಬ್ಲಾಕ್‌ನಲ್ಲಿ ಬೀದಿ ದೀಪಗಳು ಕಾರ್ಯನಿರ್ವಹಿಸುತ್ತಿಲದ ಕಾರಣ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳಬೇಕೆಂದು ವಿನಂತಿಸಿದರು.

ಕ್ರಮ:–ಬೆಸ್ಕಾಂ (ಬೀದಿ ದೀಪಗಳು) ರಾರಾ ನಗರ.

ಆನಂದ ವಾರ್ಡ್ ಸಮಿತಿ ಸದಸ್ಯರು ಮಾತಾನಾಡಿ ಸೊಳ್ಳೆ ಆವಳಿ ಹೆಚ್ಚಾಗಿದು ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಕೂಡಲೇ ಮಸ್ಕಿಟೋ ಫೋಗಿಂಗ್ ಸಿಂಪಡಿಸಲು ಕೋರಿದರು.

ಕ್ರಮ:– ಹಿರಿಯ ಆರೋಗ್ಯ ಅಧಿಕಾರಿಗಳು ಗೊರಗುಂಟೆಪಾಳ್ಯ.

ಶ್ರೀಮತಿ.ಜ್ಯೋತಿ.ಕೆ. ರವರು ಮಾತನಾಡಿ ಜೈಭುವನೇಶ್ವರಿ ನಗರ ಹಾಗೂ ಬುದ್ಧನಗರದಲ್ಲಿ ಸಾಕಷ್ಟು ಕಸ ಬಿದ್ದಿದ್ದು, ಅದನ್ನು ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ತೆರವುಗೊಳಿಸಲು ಕೋರಿದರು.

ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು(ಘನತ್ಯಾಜ್ಯ)

ಅಣ್ಣಮ್ಮ ಸರ್ಕಲ್ ಹತ್ತಿರ ಶನಿಮಹಾತ್ಮ ದೇವಸ್ಥಾನದ ರಸ್ತೆ ಬದಿಯಲ್ಲಿರುವ ಚರಂಡಿಗಳಲ್ಲಿ ಕಸ ತುಂಬಿ ನೀರು ಸರಿಯಾಗಿ ಹರಿಯುತ್ತಿಲ್ಲವೆಂದು ಶಶಿಕುಮಾರ್ ರವರು ತಿಳಿಸಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಗೊರಗುಂಟೆಪಾಳ್ಯ ಉಪವಿಭಾಗ, ಬಿ.ಬಿ.ಎಂ.ಪಿ

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Manjunath. K

(ಶ್ರೀ. ಮಂಜುನಾಥ ಕೆ.)
ಸಹಾಯಕ ಅಭಿಯಂತರರು
ಮತ್ತು ಕಾರ್ಯದರ್ಶಿ
ವಾರ್ಡ್–42.

(ಶ್ರೀ.ಎನ್.ರಮೇಶ್)
ಸಹಾಯಕ ಕಂದಾಯ ಅಧಿಕಾರಿಗಳು
ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು

ಪ್ರತಿಯನ್ನು:–

1. ವಲಯ ಆಯುಕ್ತರು, ರಾರಾನವ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ವಲಯ ಜಂಟಿ ಆಯುಕ್ತರು, ರಾರಾನವ ರವರ ಅವಗಾಹನೆಗೆ ಸಲ್ಲಿಸಿದೆ.
3. ಅಧೀಕ್ಷಕ ಅಭಿಯಂತರರು, ವಾರ್ಡ್‌ಕಮಿಟಿ ಮೇಲುಸ್ತುವಾರಿ ಅಧಿಕಾರಿಗಳು, ರಾರಾನವ ರವರ ಅವಗಾಹನೆಗೆ ಸಲ್ಲಿಸಿದೆ.